CW-01
PW-01

**1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ರಾಯಚೂರು.**

ಸ್ಪೇಷಲ್ .ಕೇಸ್(ಎಸ್.ಸಿ.ಎಸ್.ಟಿ.) ಸಂಖ್ಯೆ 04/2022

ದಿ. 18-09-2025

(ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು )

ಚಾಸಾ-01
ಪ್ರಾಸಾ-01

| | |
|---|---|
| ಸಾಕ್ಷಿದಾರರ ಹೆಸರು | ಲಕ್ಷ್ಮೀ |
| ಗಂಡನ ಹೆಸರು | ತಿಮ್ಮರೆಡ್ಡಿ |
| ವಯಸ್ಸು | 25 ವರ್ಷ |
| ಉದ್ಯೋಗ | ಒಕ್ಕಲುತನ |
| ವಾಸಸ್ಥಳ | ಮಾಚನೂರು |

**ಮುಖ್ಯ ವಿಚಾರಣೆಃ ಸಾರ್ವಜನಿಕ ಅಭಿಯೋಜಕರಿಂದಃ-**

1. ನಾನು ಹಿಂದೂ ನಾಯಕ ಜಾತಿಗೆ ಸೇರಿದವಳಾಗಿರುತ್ತೇನೆ.

2. ಚಾಸಾ-2 ನನ್ನ ಗಂಡ.

3. ಚಾಸಾ-3 ನನ್ನ ಅತ್ತೆ.

4. ನನಗೆ ಚಾಸಾ-4 ರಿಂದ 7 ಗೊತ್ತು.

5. ಈಗ ನ್ಯಾಯಾಲಯದಲ್ಲಿ ಹಾಜರಿರುವ ಆರೋಪಿ ಹಿಂದೂ ಕುರುಬ ಸಮುದಾಯಕ್ಕೆ ಸೇರಿದವರಾಗಿದ್ದು ನನಗೆ ಗೊತ್ತು.

6. ಈಗ ಸುಮಾರು 4 ವರ್ಷಗಳ ಹಿಂದೆ ಒಂದು ದಿನ ನಾನು ಮತ್ತು ಚಾಸ-3 ಹತ್ತಿ ಬಿಡಿಸಲೆಂದು ನಮ್ಮ ಜಮೀನಿಗೆ ಹೋಗಿದ್ದೆವು.

CW-01
PW-01

7. ನಂತರ ಸಾಯಂಕಾಲ ಸುಮಾರು 6 ಗಂಟೆ ಸಮಯದಲ್ಲಿ ನಾನು ಒಬ್ಬಳೇ ಚಾಸಾ-3 ಇವಳು ಹೇಳಿದಂತೆ ಮನೆಗೆ ಬರುತ್ತಿದ್ದಾಗ ಒಂದು ಹಿಟ್ಟಿನ ಗಿರಣಿಯ ಹತ್ತಿರ ಆರೋಪಿತನು ತನ್ನ ಫೋನ್ ನಂಬರ್ ತೆಗೆದುಕೋ ಎಂದು ನನಗೆ ಹೇಳಿರುತ್ತಾನೆ.

8. ಆಗ ನಾನು ಅದನ್ನು ತಿರಸ್ಕರಿಸಿದ್ದರಿಂದ ಆರೋಪಿತನು ಸದರಿ ವಿಚಾರವನ್ನು ಯಾರಿಗೂ ತಿಳಿಸದಂತೆ ಎಚ್ಚರಿಕೆ ನೀಡಿ ನನ್ನ ಕೈ ಹಿಡಿದು ಎಳೆದಾಡಿದಾಗ ನಾನು ಜೋರಾಗಿ ಚೀರಿಕೊಂಡು ಅಲ್ಲಿಂದ ಬಿಡಿಸಿಕೊಂಡು ಮನೆಗೆ ಓಡಿ ಹೋಗಿರುತ್ತೇನೆ.

9. ಬೇರೆ ಯಾರಿಗಾದರೂ ಹೇಳಿದಲ್ಲಿ ನನ್ನನ್ನು ಕೊಲ್ಲುವುದಾಗಿ ಆರೋಪಿತನು ಹೆದರಿಸಿರುತ್ತಾನೆ.

10. ಸದರಿ ವಿಚಾರವನ್ನು ನಾನು ನನ್ನ ಗಂಡನಾದ ಚಾಸಾ-2 ಈತನಿಗೆ ರಾತ್ರಿ 8 ಗಂಟೆ ಸಮಯದಲ್ಲಿ ತಿಳಿಸಿದಾಗ ನನ್ನ ಗಂಡ ಚಾಸಾ-2 ನನ್ನ ಗಂಡನ ಅಣ್ಣನಾದ ಚೆನ್ನಬಸವ ಇವರು ವಿಚಾರ ಮಾಡಲೆಂದು ಆರೋಪಿತರ ಮನೆಗೆ ಹೋಗಿರುತ್ತಾರೆ.

11. ಆಗ ನನ್ನ ಗಂಡ ಮತ್ತು ಆತನ ಅಣ್ಣನಿಗೆ ಆರೋಪಿತನು ಭಾಡ್ಯಾ ಎಂದು ಬೈದಿರುತ್ತಾನೆಂದು ತಿಳಿದಿರುತ್ತದೆ.

12. ಅದು ಅಲ್ಲದೇ ನನ್ನ ಗಂಡ ಚಾಸಾ-2 ಈತನ ಅಂಗಿ ಹಿಡಿದು ಎಳೆದಾಡಿ ಆರೋಪಿತನು ಹೊಡದಿದ್ದಲ್ಲದೇ ಇನ್ನೊಮ್ಮೆ ಬಂದಲ್ಲಿ ಜೀವ ಸಹಿತ ಉಳಿಸುವುದಿಲ್ಲ ಎಂದು ಪ್ರಾಣದ ಬೆದರಿಕೆ ಹಾಕಿರುತ್ತಾನೆಂದು ಚಾಸಾ-2 ಈತನು ನನಗೆ ಹೇಳಿರುತ್ತಾನೆ.

CW-01
PW-01

13. ನಂತರ ಮಾರನೇ ದಿನ ರಾತ್ರಿ ಚಾಸಾ-8 ಈತನಿಂದ ಒಂದು ದೂರನ್ನು ಬರೆಯಿಸಿ ಪೊಲೀಸರಲ್ಲಿ ಸಲ್ಲಿಸಿರುತ್ತೇನೆ.

14. ಸದರಿ ದೂರನ್ನು ಈಗ ನೋಡಿ ಗುರುತಿಸುತ್ತಿರುವುದರಿಂದ ಅದನ್ನು ನಿಪಿ-1 ಎಂದು ಮತ್ತು ಅದರ ಮೇಲಿರುವ ನನ್ನ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು.

15. ನಂತರ 2 ದಿನಗಳ ಮೇಲೆ ಪೊಲೀಸರು ಘಟನಾ ಸ್ಥಳಕ್ಕೆ ಭೇಟಿ ನೀಡಿ ಒಂದು ಸ್ಥಳ ಪಂಚನಾಮೆಯನ್ನು ಮಾಡಿ ಅದರ ಅಡಿಯಲ್ಲಿ ಚಾಸಾ-2 ಈತನ ಅಂಗಿಯನ್ನು ಅಮಾನತ್ತು ಪಡಿಸಿಕೊಂಡು ನಂತರ ಸದರಿ ಪಂಚನಾಮೆಯ ಮೇಲೆ ನನ್ನ ಸಹಿಯನ್ನು ಪಡೆದಿರುತ್ತಾರೆ.

16. ಸದರಿ ಸ್ಥಳದ ಪಂಚನಾಮೆಯನ್ನು ಈಗ ನೋಡಿ ಗುರುತಿಸುತ್ತಿರುವುದರಿಂದ ಅದನ್ನು ನಿಪಿ-2 ಎಂದು ಮತ್ತು ಅದರ ಮೇಲಿರುವ ನನ್ನ ಸಹಿಯನ್ನು ನಿಪಿ-2(ಎ) ಎಂದು ಗುರುತಿಸಲಾಯಿತು.

17. ಅದೇ ಸಮಯದಲ್ಲಿ ಪೊಲೀಸರು ಒಂದು ವರ್ಣ ರಂಜಿತ ಛಾಯಾ ಚಿತ್ರವನ್ನು ತೆಗೆಸಿದ್ದು, ಅದನ್ನು ಈಗ ನೋಡಿ ಗುರುತಿಸುತ್ತಿರುವುದರಿಂದ ನಿಪಿ-3 ಎಂದು ಗುರುತಿಸಲಾಯಿತು.

18. ಈಗ ಸದರಿ ಚಾಸಾ-2 ಈತನ ಅಂಗಿಯನ್ನು ಈಗ ನೋಡಿ ಗುರುತಿಸುತ್ತಿರುವುದರಿಂದ ಮು.ಮಾ.1 ಎಂದು ಗುರುತಿಸಲಾಯಿತು.

CW-01
PW-01

**<u>ಪಾಟೀ ಸವಾಲಃ ಶ್ರಿ ಜೆ.ಸಿ.ಪಿ. ವಕೀಲರಿಂದ ಆರೋಪಿ ಪರವಾಗಿಃ</u>**

**(ಕೂಗಿಸಲಾಯಿತು, ಗೈರು ಹಾಜರಿರುತ್ತಾರೆ. ಮಾನ್ಯ ಸರ್ವೋಚ್ಛ ನ್ಯಾಯಾಲಯಾವು ವಿನೋದ್ ಕುಮಾರ v/s ಸ್ಟೇಟ್ ಆಫ್ ಪಂಜಾಬ್ ಪ್ರಕರಣದಲ್ಲಿ ಪಾಟೀ ಸವಾಲನ್ನು ಮುಖ್ಯ ವಿಚಾರಣೆ ಮುಗಿದ ತಕ್ಷಣವೇ ಮಾಡಿ ಮುಗಿಸಬೇಕೆಂದು ಹೇಳಿರುವುದರಿಂದ, ಸಮಯಾವಕಾಶ ಕೊಡಲು ಯಾವುದೇ ಸಕಾರಣ ಇರದೇ ಇರುವುದರಿಂದ ಅವರ ಮನವಿಯನ್ನು ನಿರಾಕಾರಿಸಿ ಪಾಟೀ ಸವಾಲನ್ನು ಏನು ಇಲ್ಲ ಎಂದು ತೆಗೆದುಕೊಳ್ಳಲಾಯಿತು. )**

ಮರುವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು.)

ಓ. ಹೇ. ಕೇ. ಸರಿ ಇದೆ ಎಂದು ಸಾಕ್ಷಿ ಒಪ್ಪಿದ್ದಾರೆ.

(ಜಿ.ಡಿ.ಮಹಾವರ್ಕರ್)
1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ರಾಯಚೂರು.